ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ, ಶ್ರೀರಂಗಪಟ್ಟಣ.

ಸಾಕ್ಷಿಗೆ ಪ್ರಮಾಣ ವಚನ ಮಾಡಲಾದ ದಿ : 10.03.2023
ಪಾಟಿ ಸವಾಲು : ಆರೋಪಿ ಪರ ಶ್ರೀ ವಿ.ಎಸ್.ಡಿ. ವಕೀಲರಿಂದ

ನಾನು ಅರಕೆರೆ ಗ್ರಾಮ ವಾಸಿ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆ ಹಾಜರುಪಡಿಸಿದ್ದೇನೆ. ನಾನು ಆಧಾರ ಕಾರ್ಡ್ ಹಾಜರುಪಡಿಸಿದ್ದೇನೆ. ಆರೋಪಿ ನನ್ನ ತಾಯಿಯ ತಂಗಿಯ ಗಂಡ. ಆರೋಪಿಗೆ ಇಬ್ಬರು ಮಕ್ಕಳು. ಅವರೆಂದರೆ ಅನಿತಾ ಮತ್ತು ಅರುಣಾ. ಆರೋಪಿಯ ಹೆಂಡತಿ ಹೆಸರು ಪ್ರಭಾ.

ಆರೋಪಿ ನನ್ನ ಹತ್ತಿರ ನನಗೆ ಹಣ ಬೇಕೆಂದು ಮಾರ್ಚಿ 2021 ರಲ್ಲಿ ಕೇಳಿರುತ್ತಾರೆ. ಆತ ನನ್ನ ಹತ್ತಿರ ಹಣ ಕೇಳಿದ ನಿರ್ದಿಷ್ಟ ದಿನಾಂಕ, ವಾರ ಹಾಗೂ ಸಮಯ ಈಗ ನೆನಪಿಲ್ಲ.

ಆರೋಪಿಗೆ ನಾನು ಹಣ ನೀಡುವ ಕಾಲಕ್ಕೆ ನನ್ನ ಗಂಡ ಸಹ ಅಲ್ಲಿ ಹಾಜರಿದ್ದರು. ಆರೋಪಿಗೆ ನಾನು ರೂ.500 ಮುಖ ಬೆಲೆಯ ನೋಟುಗಳನ್ನು ನೀಡಿರುತ್ತೇನೆ. ನಾನು ಆರೋಪಿಗೆ ಕೊಟ್ಟ ರೂ.4,80,000/- ಗಳನ್ನು ಉಳಿತಾಯ ಮಾಡಿ ಇಟ್ಟಿದ್ದೆ. ನನ್ನ ಹತ್ತಿರ ಆರೋಪಿಗೆ ಕೊಟ್ಟ ಹಣ ನಗದು ರೂಪದಲ್ಲಿತ್ತು.

ನಾನು ಆರೋಪಿಗೆ ಕಳುಹಿಸಿದ್ದ ನೋಟೀಸ್ ನಲ್ಲಿ ಆತನಿಗೆ ಕೊಟ್ಟ ಹಣ ನಾನು ಉಳಿತಾಯ ಮಾಡಿ ಇಟ್ಟಿದ್ದು ಅದನ್ನು ನಗದು ರೂಪದಲ್ಲಿ ಕೊಟ್ಟಿದ್ದೇನೆ ಎಂದು ತಿಳಿಸಿರುತ್ತೇನೆ. ನಾನು ಸಲ್ಲಿಸಿದ್ದ ದೂರಿನಲ್ಲಿಯೂ ಸಹ ಸದರಿ ಅಂಶಗಳನ್ನು ನಮೂದು ಮಾಡಿದ್ದೇನೆ.

ನಾನು ಟೈಲರಿಂಗ್ ಕೆಲಸ ಮಾಡುತ್ತಿದ್ದು ಅದರಲ್ಲಿ ಬಂದ ಆದಾಯದಲ್ಲಿ ಸ್ವಲ್ಪ ಭಾಗ ಉಳಿತಾಯ ಮಾಡಿದ್ದು, ನನ್ನ ಗಂಡ ಸರ್ಕಾರಿ ಕೆಲಸದಲ್ಲಿರುವ ಕಾರಣ ಅವರಿಂದ ಸಹ ಹಣ ಪಡೆದು ಉಳಿತಾಯ ಮಾಡಿರುತ್ತೇನೆ. ನಾನು ಸುಮಾರು 6-7 ವರ್ಷಗಳಿಂದ ಟೈಲರಿಂಗ್ ಕೆಲಸ ಮಾಡುತ್ತೇನೆ. ನನ್ನ ಟೈಲರಿಂಗ್ ಕೆಲಸದಿಂದ ಬಂದ ಆದಾಯದಿಂದ ಉಳಿತಾಯ ಮಾಡಿದ ಹಣ ಹಾಗೂ ನನ್ನ ಗಂಡ ಸರ್ಕಾರಿ ಕೆಲಸದಲ್ಲಿರುವ ಕಾರಣ ಅವರಿಂದ ಪಡೆದು ಉಳಿತಾಯ ಮಾಡಿದ ಹಣವನ್ನು ಒಟ್ಟಾಗಿ ಸೇರಿಸಿ ಆರೋಪಿಗೆ ನೀಡಿದ್ದೇನೆಂದು ನಾನು ಆರೋಪಿಗೆ ಕಳುಹಿಸಿದ್ದ ನೋಟೀಸ್ ನಲ್ಲಿ ವಿವರಿಸಿಲ್ಲ. ಆ ರೀತಿ

ನನ್ನ ಉಳಿತಾಯದ ಬಗ್ಗೆ ಆರೋಪಿಗೆ ಕಳುಹಿಸಿದ್ದ ನೋಟೀಸ್ ನಲ್ಲಿ ತಿಳಿಸಲು ತೊಂದರೆ ಇರಲಿಲ್ಲ.

ನಾನು ಮನೆಯಲ್ಲಿಯೇ ನನ್ನ ಟೈಲರಿಂಗ್ ಕೆಲಸವನ್ನು ಮಾಡುತ್ತೇನೆ. ನಾನು ಟೈಲರಿಂಗ್ ಕೆಲಸ ಮಾಡುವ ಬಗ್ಗೆ ಅದಕ್ಕೆ ಸಂಬಂಧಿಸಿದ ಸಂಘದಲ್ಲಿ ಸದಸ್ಯೆ ಆಗಿಲ್ಲ. ನಮ್ಮ ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಟೈಲರಿಂಗ್ ಸಂಘ ಇರುತ್ತದೆ. ಸದರಿ ಸಂಘದಲ್ಲಿ ನಾನು ಸದಸ್ಯೆ ಆಗಲು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲವೆಂದು ನುಡಿಯುತ್ತಾರೆ. ನಾನು ಟೈಲರಿಂಗ್ ಕೆಲಸ ಮಾಡುವ ಬಗ್ಗೆ ದಾಖಲಾತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಿಲ್ಲ. ನಾನು ಟೈಲರಿಂಗ್ ಕೆಲಸ ಮಾಡುವುದಿಲ್ಲ ಹಾಗೂ ಸದರಿ ಕೆಲಸದಿಂದ ನನಗೆ ಯಾವುದೇ ಆದಾಯ ಸಹ ಇಲ್ಲ ಆದರೂ ಕೂಡ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿಗೆ ಹೇಗಾದರೂ ಮಾಡಿ ತೊಂದರೆ ಕೊಡಬೇಕು ಎನ್ನುವ ಉದ್ದೇಶದಿಂದ ಟೈಲರಿಂಗ್ ಕೆಲಸ ಮಾಡುತ್ತೇನೆಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನನ್ನ ಗಂಡ ಬಿ.ಎಂ.ಟಿ.ಸಿ ಇಲಾಖೆಯಲ್ಲಿ ಕೆಲಸ ಮಾಡುತ್ತಾರೆ. ನನ್ನ ಗಂಡ ಬಿಎಂ.ಟಿ.ಸಿ ಇಲಾಖೆಯಲ್ಲಿ ಖಾಯಂ ನೌಕರರಾಗಿದ್ದಾರೆ. ನನ್ನ ಗಂಡ ಬಿ.ಎಂ.ಟಿ.ಸಿ ಇಲಾಖೆಯಲ್ಲಿ ಖಾಯಂ ನೌಕರರಾಗಿ ಕೆಲಸ ಮಾಡುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ. ಅದರ ಸಂಬಂಧ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ.

ನನ್ನ ಗಂಡನಿಗೆ ಮಾಹೆಯಾನ ರೂ.35,000/- ಸಂಬಳವಿದ್ದು ಎಲ್ಲಾ ಉಳಿತಾಯ ಸಾಲಗಳನ್ನು ಕಡಿತಗೊಳಿಸಿ ರೂ.22,000/- ಹಣ ಬರುತ್ತದೆ. ವಾರ್ಷಿಕ ನನ್ನ ಗಂಡನಿಗೆ ತನ್ನ ಸಂಬಳದಿಂದ ರೂ.2,50,000/- ಆದಾಯ ಇರಬಹುದು. ನನ್ನ ಗಂಡನಿಗೆ ನೌಕರಿಯಿಂದ ಬರುವ ಆದಾಯ ಹೊರತು ಪಡಿಸಿ ಬೇರೆ ಯಾವುದೇ ಆದಾಯ ಇರುವುದಿಲ್ಲ. ನನಗೆ ಟೈಲರಿಂಗ್ ಕೆಲಸ ಹೊರತುಪಡಿಸಿ ಬೇರೆ ಆದಾಯ ಇರುವುದಿಲ್ಲ.

ನನಗೆ ಒಬ್ಬ ಮಗನಿರುತ್ತಾನೆ. ಆತ ಈಗ ಹತ್ತನೇ ತರಗತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಾನೆ. ನನ್ನ ಗಂಡನಿಗೆ ಮಾಹೆಯಾನ ರೂ.2-3 ಸಾವಿರ ಖರ್ಚು ಇರುತ್ತದೆ. ನನಗೆ ಮಾಹೆಯಾನ ರೂ.5,000/- ಖರ್ಚಿಗೆ ಬೇಕಾಗುತ್ತದೆ. ನನ್ನ ಮಗನ ವಿದ್ಯಾಭ್ಯಾಸಕ್ಕಾಗಿ ರೂ.15,000/- ವಾರ್ಷಿಕ ಫೀಸ್ ಕೊಡಲಾಗುತ್ತದೆ. ನನ್ನ ಮಗನ ವಿದ್ಯಾಭ್ಯಾಸಕ್ಕೆ ಮಾಹೆಯಾನ ರೂ.1,000/- ಹಣ ಬೇಕಾಗುತ್ತದೆ.

ಮಾಹೆಯಾನ ನಮ್ಮ ಕುಟುಂಬದವರಿಗೆ ರೂ.9-10 ಸಾವಿರ ಖರ್ಚು ಇರುತ್ತದೆ. ನನ್ನ ಗಂಡನ ನೌಕರಿಯಿಂದ ಬಂದ ಹಣದಲ್ಲಿ ನಾನು ಉಳಿತಾಯ ಮಾಡಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಬರುವ ಸಂಬಳ ನಮ್ಮ ಸಂಸಾರದ ಖರ್ಚಿಗೆ ಸರಿ ಹೋಗುತ್ತಿದ್ದು ಯಾವುದೇ ಉಳಿತಾಯ ಮಾಡಲು ಸಾಧ್ಯವಿಲ್ಲ ಎಂದರೆ ಸರಿಯಲ್ಲ.

ನನ್ನ ಗಂಡನಿಂದ ಪಡೆದ ಹಣದಿಂದ ಉಳಿತಾಯ ಮಾಡಿದ್ದೇನೆಂದು ನನ್ನ ದೂರಿನಲ್ಲಿ ತಿಳಿಸಿಲ್ಲ. ನಾನು ಯಾವುದೇ ರೀತಿಯಾಗಿ ನನ್ನ ಗಂಡನಿಂದ ಹಣ ಪಡೆದು ಉಳಿತಾಯ ಮಾಡಿಲ್ಲ ಆದರೂ ಕೂಡ ಉಳಿತಾಯ ಮಾಡಿದ್ದೇನೆಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮಾರ್ಚ್ 2021 ರಲ್ಲಿ ನಾನು ಆರೋಪಿಗೆ ಹಣ ನೀಡಿದ್ದೆ ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ನಾನು ಎಂ.ಡಿ.ಸಿಸಿ. ಬ್ಯಾಂಕ್ ಅರಕೆರೆ ಶಾಖೆಯಲ್ಲಿ ಖಾತೆ ಹೊಂದಿದ್ದೇನೆ. ಸದರಿ ಖಾತೆಯನ್ನು ಯಾವ ವರ್ಷದಲ್ಲಿ ತೆರೆದಿದ್ದೇನೆಂದು ಗೊತ್ತಿಲ್ಲ. ಸದರಿ ಖಾತೆ ಉಳಿತಾಯ ಖಾತೆಯಾಗಿರುತ್ತದೆ. ಸದರಿ ಖಾತೆಯಲ್ಲಿ ಹಣ ಇಡುವುದು ಮತ್ತು ತೆಗೆದುಕೊಳ್ಳುವುದನ್ನು ಮಾಡಿಲ್ಲ ಎಂದರೆ ಸರಿಯಲ್ಲ. ನನ್ನ ಬ್ಯಾಂಕ್ ಖಾತೆಯಲ್ಲಿ ಎಷ್ಟು ಬಾರಿ ವ್ಯವಹರಿಸಿದ್ದೇನೆ ಎನ್ನುವ ಬಗ್ಗೆ ಗೊತ್ತಿಲ್ಲ. 2021 ಸಾಲಿನಲ್ಲಿ ನನ್ನ ಬ್ಯಾಂಕ್ ಖಾತೆಯಲ್ಲಿ ಎಷ್ಟು ಬಾರಿ ವ್ಯವಹರಿಸಿದ್ದೇನೆಂದು ನೆನಪಿಲ್ಲ.

ನಾನು ಈ ಕೇಸಿನಲ್ಲಿ ಹಾಜರುಪಡಿಸಿರುವ ಚೆಕ್ ಅನ್ನು ಆರೋಪಿಯ ಮನೆಯಿಂದ ಕಳ್ಳತನ ಮಾಡಿಕೊಂಡು ಬಂದಿದ್ದೇನೆ ಎಂದರೆ ಸುಳ್ಳು.

ಆರೋಪಿಯ ಹೆಂಡತಿಗೆ 4 ಜನ ಅಕ್ಕ ತಂಗಿಯರು. ಅವರಲ್ಲಿ ನನ್ನ ತಾಯಿ ಮೂರನೇಯವರು. ಆರೋಪಿಯ ಹೆಂಡತಿ ಕೊನೆಯವರು. ನನ್ನ ಅಜ್ಜಿ ಹೆಸರು ಬೋರಮ್ಮ ಅವರಿಗೆ ಗಂಡು ಸಂತಾನ ಇರುವುದಿಲ್ಲ. ಬೋರಮ್ಮನವರಿಗೆ ಒಟ್ಟು ಎಷ್ಟು ಜಮೀನು ಇತ್ತು ಎಂದು ನನಗೆ ಗೊತ್ತಿಲ್ಲ. ಬೋರಮ್ಮನವರಿಗೆ ಸೇರಿದ ಆಸ್ತಿಯ ಸಂಬಂಧ ನನ್ನತಾಯಿ ಹಾಗೂ ದೊಡ್ಡಮ್ಮಂದಿರು ಆರೋಪಿಯ ಹೆಂಡತಿ ಹೆಸರಿಗೆ 2 ಬಾರಿ ನೋಂದಾಯಿತ ಹಕ್ಕು ಖುಲಾಸೆ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸುಳ್ಳು.

ಹಕ್ಕು ಖುಲಾಸೆ ಪತ್ರವನ್ನು ನೊಂದಾವಣೆ ಮಾಡಿಕೊಟ್ಟ ನಂತರ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಆತನ ಮನೆಯಿಂದ ನಿಪಿ.1 ಚೆಕ್ ಅನ್ನು ಕಳ್ಳತನ

ಮಾಡಿಕೊಂಡು ಬಂದಿದ್ದೇನೆ ಎಂದರೆ ಸುಳ್ಳು. ದಿಃ 09.04.2021 ರಂದು ನಾನು ಆತನಿಗೆ ಸೇರಿದ ಚೆಕ್ ಅನ್ನು ಕಳ್ಳತನ ಮಾಡಿಕೊಂಡು ಬಂದಿದ್ದೇನೆಂದು ಕೆ.ಆರ್.ಪೇಟೆ ಗ್ರಾಮಾಂತರ ಪೋಲೀಸ್ ಠಾಣೆಯಲ್ಲಿ ನನ್ನ ವಿರುದ್ದ ಆರೋಪಿ ದೂರು ದಾಖಲು ಮಾಡಿದ್ದಾರೆ ಎಂದರೆ ಸರಿ. ಕೆ.ಆರ್.ಪೇಟೆ ಗ್ರಾಮಾಂತರ ಪೋಲೀಸ್ ನವರು ಆರೋಪಿ ನೀಡಿದ ದೂರಿನ ಸಂಬಂಧ ಯಾವುದೇ ಕ್ರಮ ಕೈಗೊಳ್ಳದ ಕಾರಣ ಆತ ಸರ್ಕಲ್ ಇನ್ಸಪೆಕ್ಟರ್, ಡಿ.ವೈ.ಎಸ್.ಪಿ, ಎಸ್.ಪಿ ಹಾಗೂ ಐ.ಜಿ ರವರಿಗೆ ದೂರನ್ನು ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಆರೋಪಿ ಕೊಟ್ಟಿದ್ದ ದೂರಿನ ಸಂಬಂಧ 2-3 ಬಾರಿ ಪೊಲೀಸ್ ಠಾಣೆಗೆ ಹೋಗಿದ್ದೇನು ಎಂದರೆ ಸಾಕ್ಷಿಯು 1 ಬಾರಿ ಮಾತ್ರ ಹೋಗಿದ್ದೆ ಎಂದು ನುಡಿಯುತ್ತಾರೆ. ಪೋಲೀಸ್ ಠಾಣೆಯಲ್ಲಿ ನಾನು, ನನ್ನ ಗಂಡ, ಆರೋಪಿ ಹಾಗೂ ಊರಿನ 2-3 ಜನ ಗ್ರಾಮಸ್ದರು ಇದ್ದರು ಎಂದರೆ ಸುಳ್ಳು.

ಪೋಲೀಸ್ ಠಾಣೆಯಲ್ಲಿ ನನ್ನ ತಾಯಿಗೆ ಬರಬೇಕಾದ ಆಸ್ತಿಯನ್ನು ಕೊಟ್ಟರೆ ಚೆಕ್ ಅನ್ನು ಆರೋಪಿಗೆ ವಾಪಸ್ಸು ಕೊಡುತ್ತೇನೆಂದು ಹೇಳಿಕೆಯನ್ನು ನೀಡಿದ್ದೇನು ಎಂದರೆ ಸುಳ್ಳು.

ನನ್ನ ಗಂಡನ ಸ್ವಂತ ಊರು ನಾಗಮಂಗಲ ತಾಲ್ಲೂಕಿನ ಬೆಳ್ಳೂರು. 2021 ಫೆಬ್ರವರಿ ತಿಂಗಳಿನಲ್ಲಿ ಬೂಕನಕೆರೆಗೆ ಹೋಗಿರುತ್ತೇನೆ ಆದರೆ ಎಷ್ಟು ಬಾರಿ ಎಂದು ನೆನಪಿಲ್ಲ. ನಾನು ಹೋದಾಗ ಕೆಲವು ಬಾರಿ ನನ್ನ ಗಂಡನ ಜೊತೆ ಸಹ ಹೋಗಿರುತ್ತೇನೆ. ಹಲವಾರು ಬಾರಿ ನಾವು ಬೂಕನಕೆರೆಗೆ ಹೋದಾಗ ಅಕಸ್ಮಾತ್ ಆರೋಪಿ ಮನೆಯಲ್ಲಿ ಯಾರು ಇಲ್ಲದ ಸಮಯದಲ್ಲಿ ಬಾಗಿಲು ತೆಗೆದು ಅಡುಗೆ ಮಾಡಿಕೊಂಡು ಅಲ್ಲಿಯೇ ಇದ್ದು ಆರೋಪಿಯ ಮನೆಯ ಕುಟುಂಬಸ್ದರು ಬರುವ ತನಕ ಕಾದು ಅವರನ್ನು ಮಾತನಾಡಿಕೊಂಡು ಬರುತ್ತಿದ್ದೇವು ಎಂದರೆ ಸರಿ. ಒಂದು ಬಾರಿ ಆರೋಪಿಯ ಮನೆಯವರು ಇರಲಿಲ್ಲ ಎಂದರೆ ಸರಿ. ಆರೋಪಿಯ ಮಗಳ ಮಗ ನಿಖಿಲ್.ಎಂ.ಗೌಡ ಗೊತ್ತು.

ಫೆಬ್ರವರಿ 2021 ರಲ್ಲಿ ನಾವು ಆರೋಪಿಯ ಮನೆಗೆ ಹೋಗಿದ್ದು ಅಲ್ಲಿ ಆರೋಪಿಯ ಹೆಂಡತಿ ಜಮೀನಿನಲ್ಲಿ ಕೆಲಸ ಮಾಡಲು ಜಮೀನಿನ ಹತ್ತಿರ ಹೋಗಿದ್ದು ಆರೋಪಿ ನಿಖಿಲ್ ಎಂ.ಗೌಡ ರವರ ಹಾಲ್ ಟಿಕಟ್ ತರಲು ಬೆಂಗಳೂರಿಗೆ ಹೋಗಿದ್ದು ಆ ಸಮಯದಲ್ಲಿ ನಾನು ಅವರ ಮನೆಯಲ್ಲಿ ಸುಮಾರು ಅರ್ಧ ಗಂಟೆ ಇದ್ದೇನು ಎಂದರೆ ಸಾಕ್ಷಿಯು 10 ನಿಮಿಷಗಳ ಕಾಲ ಇದ್ದೇನು ಎಂದು ನುಡಿಯುತ್ತಾರೆ. ನಾನು ಆರೋಪಿ ಮತ್ತು ಆರೋಪಿಯ ಹೆಂಡತಿ ಎಲ್ಲಿದ್ದಾರೆ ಎನ್ನುವ ಬಗ್ಗೆ ವಿಚಾರಿಸಿದ್ದೇನೆ. ಆರೋಪಿ ಹೆಂಡತಿ

ಹಾಲ್ ಟಿಕೆಟ್ ತರಲು ನಾನೇ ಹೋಗುತ್ತಿದ್ದೇನೆ ಎಂದು ಹೇಳಿದರು.  ಆರೋಪಿ ಆ ಸಮಯದಲ್ಲಿ ಎಲ್ಲಿ ಹೋಗಿದ್ದರು ಎನ್ನುವ ಬಗ್ಗೆ ನನಗೆ ನೆನಪಿಲ್ಲ.

ಆರೋಪಿ ತನ್ನ ಮನೆಯ ದಿವಾನ್ ಕಾಟ್ ನ ಹಾಸಿಗೆ ಅಡಿಯಲ್ಲಿ ಎಸ್.ಬಿ.ಐ, ಬೂಕನಕೆರೆ ಶಾಖೆಗೆ ಸಂಬಂಧಿಸಿದ ಚೆಕ್ ಪುಸ್ತಕವನ್ನು ಇಟ್ಟಿದ್ದರು ನಾನು ಮತ್ತು ನನ್ನ ಗಂಡ ಅದನ್ನು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಕಳ್ಳತನ ಮಾಡಿಕೊಂಡು ಬಂದಿದ್ದೇವೆ ಎಂದರೆ ಸುಳ್ಳು.  ಎಸ್.ಬಿ.ಐ ಬೂಕನಕೆರೆ ಶಾಖೆಗೆ ಸಂಬಂಧಿಸಿದ ಚೆಕ್ ಅನ್ನು ಕೊಟ್ಟಿದ್ದಾರೆಂದು ನಾನು ಕೇಸು ದಾಖಲು ಮಾಡಿದ್ದೇನೆ ಎಂದರೆ ಸರಿ.

ಆರೋಪಿಗೆ ಸೇರಿದ ಅಕೌಂಟ್ ನಂಬರ್ ನನಗೆ ಗೊತ್ತಿಲ್ಲ.  ಆರೋಪಿಗೆ ಸೇರಿದ ಚೆಕ್ ಬುಕ್ ನಲ್ಲಿದ್ದ ಎರಡು ಚೆಕ್ ಗಳನ್ನು ಪಡೆದು ನಾನು ಈ ಕೇಸು ದಾಖಲು ಮಾಡಿದ್ದು ನನ್ನ ಅಕ್ಕ ವಿನುತಾ ಪಾಂಡವಪುರದ ನ್ಯಾಯಾಲಯದಲ್ಲಿ ಕೇಸು ದಾಖಲು ಮಾಡಿದ್ದೇವೆ ಎಂದರೆ ಸರಿ.  ನನ್ನ ಅಕ್ಕ ದಾಖಲು ಮಾಡಿರುವ ಕೇಸು ಈಗ ವಿಚಾರಣಾ ಹಂತದಲ್ಲಿದೆ ಎಂದರೆ ನನಗೆ ಗೊತ್ತಿಲ್ಲ.

ನಾನು ಮತ್ತು ನನ್ನ ಅಕ್ಕ ಚೆಕ್ ಗಳನ್ನು ನಗದೀಕರಣಗೊಳಿಸಿಕೊಳ್ಳಲು ಒಂದೇ ತಿಂಗಳಿನಲ್ಲಿ ಸಲ್ಲಿಸಿದ್ದೇವೆ ಎಂದರೆ ಸರಿ.

(ಈ ಹಂತದಲ್ಲಿ ಮಾನ್ಯ ಆರೋಪಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟಿ ಸವಾಲಿಗಾಗಿ ಸಮಯಾವಕಾಶ ಕೋರಿದ್ದು ನೀಡಲಾಗಿದೆ)

**ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

**ಸಾ.ಓ.ಹೇ.ಸ.ಒ**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆಎಂಎಫ್‌ಸಿ., ಶ್ರೀರಂಗಪಟ್ಟಣ.**